


ಸ್ಯಾನ್‌ಫ್ರಾನ್ಸಿಸ್ಕೋ ನಗರದ ಬುಶ್‌ನೆಲ್ ಸ್ಟುಡಿಯೋದಲ್ಲಿ ಪರಿಣತ ಛಾಯಾಗ್ರಾಹಕನೊಬ್ಬನು ಈ ಛಾಯಾಚಿತ್ರವನ್ನು ತೆಗೆದನು. ಹೀಗಾಗಿ ಕುಳಿತಿರುವ ಭಂಗಿಯಲ್ಲಿರುವ ಈ ಚಿತ್ರವು ಚೆನ್ನಾಗಿ ಮೂಡಿಬಂದಿದೆ.

### ಛಾಯಾಚಿತ್ರ ೯೪

ಛಾಯಾಚಿತ್ರ ೯೩ರಲ್ಲಿ ಇರುವಂತೆ, ಈ ಚಿತ್ರವನ್ನು ಕೂಡ ಬುಶ್‌ನೆಲ್ ಸ್ಟುಡಿಯೊದಲ್ಲಿಯೇ ತೆಗೆಯಲಾಯಿತು. ಈ ಚಿತ್ರದಲ್ಲಿ ಸ್ಟುಡಿಯೋ ಹಿನ್ನೆಲೆ ಕಂಡುಬರುತ್ತಿದೆ. ನಿಂತಿರುವ ಭಂಗಿಯಲ್ಲಿರುವ ಈ ಚಿತ್ರದಲ್ಲಿ ಸ್ವಾಮೀಜಿಯವರ ಭವ್ಯ ವ್ಯಕ್ತಿತ್ವವು ಎದ್ದುಕಾಣುತ್ತಿದೆ.

### ಛಾಯಾಚಿತ್ರ ೯೫

ಈ ಚಿತ್ರವು ಹಿಂದಿನ ಎರಡು ಚಿತ್ರಗಳಂತೆಯೇ, ೧೯೦೦ ಫೆಬ್ರವರಿ ತಿಂಗಳಲ್ಲಿ ಈ ಚಿತ್ರವನ್ನೂ ಸ್ಟುಡಿಯೋದಲ್ಲಿ ತೆಗೆಯಲಾಯಿತು. ಈ ಚಿತ್ರದಲ್ಲಿ ಸ್ವಾಮೀಜಿ ತುಂಬ ಆರೋಗ್ಯಕರವಾಗಿ ಕಾಣುತ್ತಾರೆ. ಆ ಸಮಯದಲ್ಲಿ ಅವರು ಮೂರು ಸಾವಿರ ಜನರು ಕೇಳುವ ರೀತಿಯಲ್ಲಿ ಗಟ್ಟಿಯಾಗಿ ಮಾತನಾಡುವಷ್ಟು ಶಕ್ತರಾಗಿದ್ದರು. ಸ್ಯಾನ್ ಫ್ರಾನ್‌ಸಿಸ್ಕೋ ಮಹಾನಗರದ 'ಗೋಲ್ಡನ್ ಗೇಟ್' ಹಾಲಿನಲ್ಲಿ ಉಪನ್ಯಾಸ ಮಾಡಿದಾಗ, ಜನರು ಕಿಕ್ಕಿರಿದು ನೆರೆದಿದ್ದರು. ಅವರ ಶಿಷ್ಯೆಯಾದ ಮಿಸೆಸ್ ಅಲ್ಲಾನ್ ಒಮ್ಮೆ ಉದ್ಗಾರ ತೆಗೆಯುತ್ತಾಳೆ: "ಸ್ವಾಮೀಜಿಯವರ ದೈಹಿಕ ಸೌಂದರ್ಯವನ್ನು ಊಹೆ ಮಾಡಲೂ ಸಾಧ್ಯವಿಲ್ಲ. ಅವರ ಮುಖ, ಅವರ ಕೈಗಳು ಅದೆಷ್ಟು ಸುಂದರವಾಗಿದ್ದವು!"








# ಸ್ವಾಮಿ ವಿವೇಕಾನಂದರು ನಿರೂಪಿಸಿದ ನೀತಿಕಥೆಗಳು



ಡಾ. ಕೆ. ಅನಂತರಾಮು

## ಕಿವಿಗೆ ಘಂಟೆಕಟ್ಟಿಕೊಂಡ ಘಂಟಾಕರ್ಣ

**ಭ**ಕ್ತಿಸಾಧನೆಯ ಪ್ರಾರಂಭದ ಹಂತದಲ್ಲಿ ಏಕದೇವರನ್ನು ಪೂಜಿಸುವ ನಿಷ್ಠೆ ಅತ್ಯಂತ ಅಗತ್ಯವಾದುದು. ಆದರೆ ಆ ಏಕನಿಷ್ಠೆಯನ್ನು ಮುಂದುಮಾಡಿಕೊಂಡು ಇತರರನ್ನು ನಿರಾಕರಿಸುವುದು, ಇತರ ದೇವರಗಳನ್ನು ಪೂಜಿಸುವವರನ್ನು ಹಿಂಸಿಸುವುದು ಸಲ್ಲದು. 'ನಾನು ಪೂಜಿಸುವ ದೇವರೇ ಶ್ರೇಷ್ಠ' ಎಂಬ ಹಠಮಾರಿತನಕ್ಕೆ ಬಿದ್ದು, ಅನ್ಯರನ್ನು ದ್ವೇಷಿಸತೊಡಗಿದರೆ, ಅದು ಮತಾಂಧತೆ ಎನಿಸುತ್ತದೆ. ಮತೀಯ ಭಾವನೆಗಳಿಂದ ಕುರುಡರಂತಾಗಿಬಿಡುವುದು ಎಂಬುದು ಮತಾಂಧತೆ ಎಂಬುದಕ್ಕಿರುವ ಅರ್ಥ. ಅದನ್ನೆಲ್ಲ ಮತಭ್ರಾಂತಿ ಎಂದೂ ಕರೆಯುತ್ತಾರೆ. ಅಪಕ್ವ ಮನಸ್ಸಿನ ಸಾಮಾನ್ಯ ವ್ಯಕ್ತಿಯು, ಇನ್ನೊಬ್ಬರನ್ನು ದ್ವೇಷಿಸದೆ ಒಬ್ಬರನ್ನು ಪ್ರೀತಿಸಲಾರನು ಎಂದಾಗ ಅದು ಧರ್ಮದಲ್ಲಿ ಮತಾಂಧತೆಯಾಗಿ ಕಾಣಿಸಿ ಕೊಳ್ಳುತ್ತದೆ. ಕ್ರೂರವಾದ ಮತಾಂಧರಿಂದ ಈಗ ಜಗತ್ತು ತುಂಬಿಹೋಗಿದೆ. ತಮ್ಮ ಆದರ್ಶಕ್ಕೆ ನಿಷ್ಠರಾಗಿರುವುದೆಂದರೆ, ಮಿಕ್ಕವರ ಆದರ್ಶಗಳನ್ನು ದ್ವೇಷಿಸುವುದು ಎಂದಾಗಿಬಿಡುತ್ತದೆ. ದ್ವೇಷಿಸುವುದು ಸುಲಭ, ಸಹಿಷ್ಣತೆ ಕಠಿಣ. ಏಕದೇವನಿಷ್ಠೆಯು ಹಗೆತನವಾಗಿ ಬೆಳೆವಾಗ, ಎಂತಹ ವಿಚಿತ್ರಗಳು ಎದ್ದುನಿಲ್ಲುತ್ತವೆ ಎಂಬುದಕ್ಕೆ ಸ್ವಾಮಿ ವಿವೇಕಾನಂದರು ಘಂಟಾಕರ್ಣನೆಂಬ ಶಿವಭಕ್ತಿಧುರಂಧರನ ಕಥೆಯನ್ನು ನಿರೂಪಿಸಿದ್ದಾರೆ.

ಪುರಾತನ ಕಾಲದಲ್ಲಿ ಘಂಟಾಕರ್ಣನೆಂಬ ದೊಡ್ಡ ಶಿವಭಕ್ತನೊಬ್ಬನಿದ್ದನು. ಅವನು ಶಿವನನ್ನು ಮಾತ್ರವೇ ಪೂಜಿಸುತ್ತಿದ್ದ ಕಾರಣದಿಂದಾಗಿ, ಶಿವನಿಗೆ ತನ್ನನ್ನೇ ಸಂಪೂರ್ಣವಾಗಿ ಅರ್ಪಿಸಿಕೊಂಡಿದ್ದುದರ ಕಾರಣದಿಂದಾಗಿ, ವಿಷ್ಣುವನ್ನೂ, ವಿಷ್ಣುಭಕ್ತರನ್ನೂ ಬಹಳ ದ್ವೇಷಿಸುತ್ತಿದ್ದನು. ವಿಷ್ಣುವಿನ ಯಾವುದೇ ನಾಮವು ಕಿವಿಯ ಮೇಲೆ ಬಿದ್ದರೂ ಸಾಕು, ಕೋಪದಿಂದ ಅವನು ಸಿಡಿಮಿಡಿಗೊಳ್ಳುತ್ತಿದ್ದನು. ಆ ನಾಮಗಳನ್ನು ಕೇಳುವುದೇ ಬೇಡ ಎಂದು ಕರ್ಣಕುಂಡಲದಂತೆ ಕಿವಿಗಳಿಗೆ ಒಂದೊಂದು ಘಂಟೆಯನ್ನೇ ಕಟ್ಟಿಕೊಂಡಿದ್ದನು. ಅದೇ ಕಾರಣವಾಗಿ ಅವನನ್ನು ಎಲ್ಲರೂ ಘಂಟಾಕರ್ಣ ಎಂದು ಕರೆಯುತ್ತಿದ್ದರು. ಕರ್ಣ ಎಂದರೆ ಕಿವಿ ಎಂದರ್ಥ. ಘಂಟಾಕರ್ಣನು ಹುಟ್ಟಿದಾಗ ಅವನ ತಾಯಿತಂದೆಗಳು ಏನು ಹೆಸರಿಟ್ಟಿದ್ದರೋ ತಿಳಿಯದು! ವಿಷ್ಣುಸಂಬಂಧಿಯಾದ ಯಾವುದಾದರೂ ನಾಮವು ಕಿವಿಯ ಮೇಲೆ ಬೀಳುವ ಸನ್ನಿವೇಶ ಬಂದರೆ ಸಾಕು, ತಲೆಯಲ್ಲಾಡಿಸಿ, ಗಂಟೆಯನ್ನು ಸದ್ದುಮಾಡಿ, ಆ ನಾಮವು ತನ್ನ ಕಿವಿಯೊಳಕ್ಕೆ ಪ್ರವೇಶಿಸದಂತೆ ಮಾಡಿಬಿಡುತ್ತಿದ್ದನು.

ಘಂಟಾಕರ್ಣನು ತನ್ನ ವಿಷಯದಲ್ಲಿಟ್ಟಿದ್ದ ದೃಢಭಕ್ತಿಯನ್ನು ಶಿವನು ಮೆಚ್ಚಿಕೊಂಡಿದ್ದನಾದರೂ ಅವನ ವಿಷ್ಣುದ್ವೇಷವನ್ನು ಮಾತ್ರ ಮೆಚ್ಚಿಕೊಂಡಿರಲಿಲ್ಲ. ಒಮ್ಮೆ ಶಿವನು ಘಂಟಾಕರ್ಣನಿಗೆ ಕಾಣಿಸಿಕೊಂಡು, "ಎಂತಹ ಮೂರ್ಖನೋ ನೀನು, ಈ ಜಗತ್ತಿಗೆ ಒಬ್ಬನೇ ದೇವರಲ್ಲದೆ ಇಬ್ಬರುಂಟೇನೋ; ನಾನೇ ವಿಷ್ಣು, ನಾನೇ ಶಿವ, ನಾನೇ ಬ್ರಹ್ಮ, ನಾನೇ ಕಾಳಿ ಎಂಬುದನ್ನು ನೀನು ಅರಿತುಕೋ! ನಾಮರೂಪಗಳು ಮಾತ್ರವೇ ಬೇರೆಬೇರೆಯೆಂಬುದನ್ನು ಅರಿತುಕೋ! ನನ್ನನ್ನು ಪೂಜಿಸುವುದು ಸರಿಯೆ, ಆದರೆ ವಿಷ್ಣುದ್ವೇಷವನ್ನು ತೊಲಗಿಸಿಬಿಡು, ಆ ನಿನ್ನ ದ್ವೇಷವನ್ನು ನಾನು ದ್ವೇಷಿಸುತ್ತೇನೆ" ಎಂದು ಬುದ್ಧಿವಾದ ಹೇಳಿದನು. ಆದರೆ ದೈವಾಂಧನಿಗೆ ಆ ಉಪದೇಶ ಹಿಡಿಸಲಿಲ್ಲ. "ನೀನು ಏನಾದರೂ ಹೇಳಿಕೋ ಸ್ವಾಮಿ, ಅದಾವುದನ್ನೂ ನಾನು ಕೇಳಲಾರೆ; ಆ ವಿಷ್ಣುವೆನಿಸಿಕೊಂಡವನ ಸಹವಾಸವೇ ನನಗೆ ಬೇಡ' ಎಂದು ಕಡ್ಡಿ ಎರಡು ತುಂಡು ಎಂಬಂತೆ ಹೇಳಿಬಿಟ್ಟನು. ಶಿವನಿಗೆ ಕೋಪಬಂದು, "ನೀನು ರಾಕ್ಷಸನಾಗು" ಎಂದು ಶಾಪಕೊಟ್ಟು ಹೊರಟುಹೋದನು.

ಘಂಟಾಕರ್ಣನು ತನ್ನ ಭವನದ ಪೂಜಾಗೃಹದಲ್ಲಿ ಸುಂದರವಾದ ಶಿವನ ವಿಗ್ರಹವೊಂದನ್ನು ಇರಿಸಿಕೊಂಡಿದ್ದನು. ಅದಕ್ಕೆ ನಿತ್ಯವೂ ನೇಮದಿಂದ ಅಷ್ಟವಿಧಾರ್ಚನೆಯನ್ನು ನೆರವೇರಿಸುತ್ತಿದ್ದನು. ಒಂದು ದಿನ ಹೀಗೆಯೇ ಘಂಟಾಕರ್ಣನು ಶಿವಪೂಜಾರಸಮಗ್ನನಾಗಿರುವಾಗ ಆ ಶಿವನ ಮೂರ್ತಿಯ ಒಂದರ್ಧ ಭಾಗದಲ್ಲಿ ವಿಷ್ಣುರೂಪವೂ ಇನ್ನೊಂದು ಅರ್ಧಭಾಗದಲ್ಲಿ ಶಿವನ ರೂಪವೂ ಗೋಚರಿಸಿತು. ಆ ಹರಿಹರರೂಪವನ್ನು ನೋಡಿಯಾದರೂ ಘಂಟಾಕರ್ಣನಿಗೆ ಶಿವನು ಬೇರೆಯಲ್ಲ, ವಿಷ್ಣವು ಬೇರೆಯಲ್ಲ ಎಂಬ ವಿವೇಕವು ಉದಿಸಲೆಂದು ಶಿವನೇ ಆ ತಂತ್ರವನ್ನು ರೂಪಿಸಿದ್ದನು. ಆದರೆ ಅದೇನೂ ಪ್ರಯೋಜನಕ್ಕೆ ಬರಲಿಲ್ಲ. ಆ ಹೊತ್ತಿಗೆ ಸರಿಯಾಗಿ ಘಂಟಾಕರ್ಣನು ಮಗಮಗಿಸುವ ಹೊಸದಾಗಿ ತಂದಿದ್ದ ಧೂಪವನ್ನು ಬೆಳಗಿಸುತ್ತಿದ್ದನು. ಅಂತಹ ದಿವ್ಯ ಪರಿಮಳವನ್ನು ತನ್ನ ಆರಾಧ್ಯದೈವವಾದ ಶಿವನು ಆಘ್ರಾಣಿಸಬೇಕೇ ಹೊರತು, ತನ್ನ ಶತ್ರುವೆನಿಸಿದ ವಿಷ್ಣವು ಅಘ್ರಾಣಿಸಬಾರದು ಎಂದು ಘಂಟಾಕರ್ಣನು ಏನು ಮಾಡಬೇಕೆಂದು ತೋರದೆ, ತಕ್ಷಣವೇ ವಿಷ್ಣುರೂಪವಿದ್ದ ಒಂದು ಭಾಗದ ಮೂರ್ತಿಯ ಮೂಗಿನ ಹೊಳ್ಳೆಯನ್ನು ತನ್ನ ಹೆಬ್ಬೆರಳಿನಿಂದ ಬಲವಾಗಿ ಮುಚ್ಚಿ ಹಿಡಿದು ಕೊಂಡುಬಿಟ್ಟನು.